ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,
ಕುಂದಾಪುರ

ಸಿ.ಸಿ. ನಂಬ್ರ: 1783/2013

ಚಾಸಾ:26 ಪ್ರಾಸಾ:13

ದಿನಾಂಕ: 02.02.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಡಾ. ಎಚ್ ದಿನಕರ |
| ತಂದೆಯ ಹೆಸರು | : | ಲೇಟ್ ಶೇಷಪ್ಪ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ ವೈದ್ಯಾಧಿಕಾರಿ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು ಆಗಸ್ಟ್ 2006 ರಿಂದ 2017ರವರೆಗೆ ಕುಂದಾಪುರದ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 28-11-2012 ರಂದು ಮಧ್ಯಾಹ್ನ 1 ಗಂಟೆಗೆ ಪ್ರಾಸಾ-1ರವರು ಕುಂದಾಪುರ ಠಾಣೆಯ ಮಹಿಳೆಯ ಪೇದೆ 2250ರವರೊಂದಿಗೆ ದಿ: 28-11-2012ರ ಮಧ್ಯಾಹ್ನ 0.015 ಗಂಟೆಗೆ ಸರಗಳ್ಳತನ ಹಿನ್ನೆಲೆ ಗಾಯಗಳಿಗೆ ಒಳಗಾಗಿದ್ದು ಆಕೆಯನ್ನು ಪರೀಕ್ಷಿಸಿದಾಗ ಕಣ್ಣಿಗೆ ಕಾಣುವಂತಹ ಗಾಯಗಳು ಕಂಡು ಬಂದಿರುವುದಿಲ್ಲ. ಕುತ್ತಿಗೆಯ ಭಾಗದಲ್ಲಿ ನೋವು ಇರುವುದಾಗಿ ತಿಳಿಸಿರುತ್ತಾರೆ.

ನನ್ನ ಅಭಿಪ್ರಾಯದಲ್ಲಿ ಮೇಲಿನ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿದ್ದು ಈ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದ್ರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ-13 ಎಂದು, ಸಾಕ್ಷಿ ಸಹಿಯನ್ನು ನಿಪಿ-ನಿಪಿ-13(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಆರ್ ಎಂ ಎಸ್ ರವರಿಂದ:**

ಮೇಲೆ ನಮೂದಿಸಿರುವುದು ಸಾಮಾನ್ಯ ಸ್ವರುಪಾದ್ದು ಎಂದರೆ ಸರಿ. ಮುಟ್ಟಿದರೆ ನೋವು ಮಾತ್ರ ತಿಳಿದು ಬರುತ್ತದೆ ಎಂದರೆ ಸರಿ. ದಿನನಿತ್ಯದ ಕೆಲಸ ಮಾಡುತ್ತಾ ಬಿದ್ದಾಗ ಕುತ್ತಿಗೆಯಲ್ಲಿ ನೋವು ಆಗುವ ಸಾಧ್ಯತೆ ಇರಬಹುದು. ಸಾಕ್ಷಿದಾರರನ್ನು ಪರಿಶೀಲಿಸಿದಾಗ ಯಾವುದೇ ಗಾಯ ಕಂಡು ಬಂದಿಲ್ಲ. ನಾನು ಯಾವುದೇ ಪರೀಕ್ಷೆ ಮಾಡದೆ ಗಾಯದ ಪ್ರಮಾಣ ಪತ್ರವನ್ನು ವಿತರಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**